# <u>ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು</u>

ಎಚ್.ಆರ್.ಸಿ. ನಂ.1860/10/31/2018

<u>ದಿನಾಂಕ 18ನೇ ಫೆಬ್ರವರಿ ಮಾಹೆ, 2020</u>

<u>ಉಪಸ್ಥಿತರು:</u>

**ಶ್ರೀ ಕೆ.ಬಿ. ಚಂಗಪ್ಪ,**

ಗೌರವಾನ್ವಿತ ಸದಸ್ಯರು

**ದೂರುದಾರರು :** ಶ್ರೀ ರಾಘವೇಂದ್ರ, ಟಿ.ಕೆ. ತಂದೆ ಕೃಷ್ಣಮೂರ್ತಿ,
ಜೆ.ಬಿ. 1003, ಸಾಲಾಪುರಿಯ ಗ್ರೀನೇಜ್ ಅಪಾರ್ಟ್‌ಮೆಂಟ್,
ಟಿ.ಬೊಮ್ಮನಹಳ್ಳಿ, ಬೆಂಗಳೂರು.

## <u>ಆದೇಶ</u>

ಈ ದೂರರ್ಜಿಯನ್ನು ಕೆ.ಆರ್. ಪುರಂ ಪೋಲೀಸ್ ಠಾಣೆಯ ಪೋಲೀಸರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಸಲುವಾಗಿ ಸಲ್ಲಿಸಲಾಗಿರುತ್ತದೆ.

2. ದೂರರ್ಜಿಯ ಸಂಕ್ಷಿಪ್ತ ವಿವರ ಏನೆಂದರೆ, ದೂರರ್ಜಿದಾರರು ದಿನಾಂಕ 10-5-2018 ರಂದು ಮೆಯೋ ಹಾಲ್ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಹಾಜರಾಗಿ ಅಲ್ಲಿಂದ ಹಿಂದಿರುಗುವಾಗ ಕೆ.ಆರ್.ಪುರಂ ಪೋಲೀಸ್ ಠಾಣೆಯ ಪೇದೆಗಳಾದ ವೆಂಕಟೇಶ್ ಮತ್ತು ಬಸವರಾಜ ಎಂಬುವವರು ದೂರುದಾರರ ವಿರುದ್ಧ ವಾರೆಂಟ್ ಇದೆಯೆಂದು ತಿಳಿಸಿ ಅವರನ್ನು ಠಾಣೆಗೆ ಕರೆದುಕೊಂಡು ಹೋಗಿ ಸಂಜೆ 5.30 ಗಂಟೆಯವರೆಗೆ ಲಾಕಪ್‌ನಲ್ಲಿ ಇಟ್ಟುಕೊಂಡಿದ್ದು ನಂತರ ಇನ್ಸ್‌ಪೆಕ್ಟರ್ ಜಯರಾಮ್ ಎಂಬುವವರ ಕೊಠಡಿಗೆ ಕರೆದುಕೊಂಡು ಹೋಗಿ ಅವರ ಕೆನ್ನೆಗೆ ಮತ್ತು ಹೊಟ್ಟೆಗೆ ಹೊಡೆದು, ಇನ್ಸ್‌ಪೆಕ್ಟರ್ ಜಯರಾಮ್ ಮತ್ತು ಸಬ್ ಇನ್ಸ್‌ಪೆಕ್ಟರ್ ಮಂಜುನಾಥ ರವರು ದೂರುದಾರರ ಬಟ್ಟೆಯನ್ನು ಬಿಚ್ಚಿಸಿ ಅವಾಚ್ಯ ಶಬ್ದಗಳಿಂದ ಬೈದು, ನಂತರ ಆತನ ಕಾಲಿಗೆ ಮತ್ತು ಬೆನ್ನಿಗೆ ಲಾಠಿಯಿಂದ ಹೊಡೆದು, ಮರುದಿನ ಬೆಳಗಿನ ಜಾವ 3.30 ಗಂಟೆಗೆ ಬೆಳಗ್ಗೆ 10.30 ಗಂಟೆಯೊಳಗೆ ಚೆಕ್ ಬೌನ್ಸ್ ಕೇಸಿಗೆ ಸಂಬಂಧಿಸಿದಂತೆ ರೂ.8,50,000/-ಗಳನ್ನು ನೀಡುತ್ತೇನೆಂದು ತಾನು ಒಪ್ಪಿಕೊಂಡ ನಂತರ ತನ್ನನ್ನು ಬಿಡುಗಡೆ ಮಾಡಿರುತ್ತಾರೆ, ಆದುದರಿಂದ ತನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸಿಸಿದವರ ಮೇಲೆ ಹಾಗೂ ಕಾನೂನು ಬಾಹಿರವಾಗಿ ಲಾಕಪ್‌ನಲ್ಲಿ ಇಟ್ಟ ಬಗ್ಗೆ ಕ್ರಮ ಕೈಗೊಳ್ಳಬೇಕೆಂಬುದಾಗಿರುತ್ತದೆ.

3. ದೂರರ್ಜಿಯಲ್ಲಿ ಉಲ್ಲೇಖಿಸಿದ ವಿಷಯವು ನಿಜವೇ ಆಗಿದ್ದಲ್ಲಿ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗುವುದರಿಂದ, ದೂರಿನ ಪ್ರತಿಯನ್ನು ಉಪ ಪೋಲೀಸ್ ಅಧೀಕ್ಷಕರು, ಕರ್ನಾಟಕ ರಾಜ್ಯ

/೯ ೬-

ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರಿಗೆ ಕಳುಹಿಸಿ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಆದೇಶಿಸಲಾಗಿದ್ದು, ಆ ಪ್ರಕಾರ ಆಯೋಗದ ಉಪ ಪೋಲೀಸ್ ಅಧೀಕ್ಷಕರು ದೂರಿನ ಬಗ್ಗೆ ವಿಚಾರಣೆ ನಡೆಸಿ, ದೂರರ್ಜಿದಾರರು ಮತ್ತು ಶ್ರೀಮತಿ ಸೆಲ್ವಿ ಎಂಬುವವರ ನಡುವೆ ಚೆಕ್ ಬೌನ್ಸ್ ಕೇಸಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿರುವಾಗ ದಿನಾಂಕ 10-5-2018ರಂದು ಮದ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಕೆ.ಆರ್.ಪುರಂ ಪೋಲೀಸ್ ಠಾಣೆಯ ಪೋಲೀಸ್ ಇನ್ಸ್‌ಪೆಕ್ಟರ್ ಜಯರಾಮ್ ಮತ್ತು ಸಬ್ ಇನ್ಸ್‌ಪೆಕ್ಟರ್ ಮಂಜುನಾಥ ರವರು ಚೆಕ್ ಬೌನ್ಸ್ ಕೇಸಿಗೆ ಸಂಬಂಧಿಸಿದಂತೆ ಶ್ರೀಮತಿ ಸೆಲ್ವಿರವರೊಂದಿಗೆ ಶಾಮೀಲಾಗಿ ದೂರುದಾರರ ವಿರುದ್ಧ ಯಾವುದೇ ಪ್ರಥಮ ವರ್ತಮಾನ ವರದಿ ಪ್ರಕರಣ ದಾಖಲಾಗದೆ ಇದ್ದರೂ ಠಾಣಾ ಎನ್‌ಸಿಆರ್ ಸಂಖ್ಯೆ 271/2018ರಲ್ಲಿ ಕೆ.ಆರ್.ಪುರಂ ಪೋಲೀಸ್ ಠಾಣೆ ಪ್ರೊಸೆಸ್ ಸಿಬ್ಬಂದಿಯವರಾದ ಹೆಚ್.ಸಿ.7771 ಶ್ರೀ ಬಸವರಾಜಪ್ಪ ಹಾಗೂ ಹೆಚ್.ಸಿ.7583 ಶ್ರೀ ವೆಂಕಟೇಶ್ ರವರು ದೂರರ್ಜಿದಾರರನ್ನು ಮೆಯೋ ಹಾಲ್ ಕೋರ್ಟ್ ಬಳಿಯಿಂದ ಒಂದು ಆಟೋದಲ್ಲಿ ಕೂಡಿಸಿಕೊಂಡು ಮುದ್ಯಾಹ್ನ ಸುಮಾರು 3.45 ಗಂಟೆಗೆ ಕೆ.ಆರ್.ಪುರಂ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ಪೋಲೀಸ್ ಇನ್ಸ್‌ಪೆಕ್ಟರ್ ಜಯರಾಮ್ ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ರವರು ಅರ್ಜಿದಾರರ ಮೇಲೆ ದೈಹಿಕ ಹಲ್ಲೆ ನಡೆಸಿ ದೂರರ್ಜಿದಾರರಿಂದ ಶ್ರೀಮತಿ ಸೆಲ್ವಿ ರವರ ಪರವಾಗಿ ಚೆಕ್ ಬೌನ್ಸ್ ಕೇಸಿಗೆ ಸಂಬಂಧಿಸಿದಂತೆ ರೂ.8,50,000/- ವಸೂಲಿ ಮಾಡಲು ಯತ್ನಿಸಿ ಅವರನ್ನು ಠಾಣೆಯಲ್ಲಿ ಬಲವಂತವಾಗಿ ಅಕ್ರಮ ಬಂಧನದಲ್ಲಿಟ್ಟು ಮರುದಿನ ಬೆಳಗ್ಗೆ 10.30 ಗಂಟೆಗೆ ದೂರರ್ಜಿದಾರರು ಶ್ರೀಮತಿ ಸೆಲ್ವಿ ಯವರಿಗೆ ಹಣ ಕೊಡಲು ಒಪ್ಪಿಕೊಂಡ ನಂತರ ಬಿಡುಗಡೆಗೊಳಿಸಿರುವುದು ಕಂಡುಬರುತ್ತದೆಂದು ವರದಿಯನ್ನು ದಿನಾಂಕ 20-12-2018ರಂದು ಸಲ್ಲಿಸಿರುತ್ತಾರೆ.

4. ಉಪ ಪೋಲೀಸ್ ಅಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರ ವರದಿ ಪ್ರತಿಯನ್ನು ಕಲಂ.16 ಪಿಹೆಚ್‌ಆರ್ ಅಧಿನಿಯಮ, 1993ರ ಅನ್ವಯ ಕೆ.ಆರ್. ಪುರಂ ಪೋಲೀಸ್ ಠಾಣೆಯ 1. ಶ್ರೀ ಜಯರಾಜ್, ಹೆಚ್. ಪಿಐ, 2. ಶ್ರೀ ಮಂಜುನಾಥ, ಹೆಚ್. ಪಿಎಸ್‌ಐ, 3. ಶ್ರೀ ಬಸವರಾಜಪ್ಪ, ಜೆ.ಎಸ್. ಹೆಚ್‌ಸಿ 7771 ಮತ್ತು 4. ಶ್ರೀ ವೆಂಕಟೇಶ್, ಜಿ. ಹೆಚ್‌ಸಿ 7583 ಇವರುಗಳಿಗೆ ಪೋಲೀಸ್ ಆಯುಕ್ತರು, ಬೆಂಗಳೂರು ರವರ ಮೂಲಕ ಕಳುಹಿಸಿದ್ದು, ಸದರಿ ನೋಟೀಸು ಮೇಲ್ಕಂಡವರಿಗೆ ಜಾರಿಯಾದ ಬಗ್ಗೆ ಪೋಲೀಸ್ ಆಯುಕ್ತರ ಕಛೇರಿಯಿಂದ ದಿನಾಂಕ 21-6-2019ರಂದು ಆಯೋಗಕ್ಕೆ ಪತ್ರ ಬಂದಿರುತ್ತದೆ. ಮೇಲೆ ಉಲ್ಲೇಖಿಸಿದ ಶ್ರೀ ಜಯರಾಜ್, ಹೆಚ್. ಪಿಐ, ಶ್ರೀ ಮಂಜುನಾಥ, ಹೆಚ್. ಪಿಎಸ್‌ಐ, ಶ್ರೀ ಬಸವರಾಜಪ್ಪ, ಜೆ.ಎಸ್. ಹೆಚ್‌ಸಿ 7771 ಮತ್ತು ಶ್ರೀ ವೆಂಕಟೇಶ್,

ಜಿ. ಹೆಚ್‌ಸಿ 7583 ರವರು ಉಪ ಪೋಲೀಸ್ ಅಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರ ವರದಿಗೆ ತಮ್ಮ ಆಕ್ಷೇಪಣೆ/ಅಭಿಪ್ರಾಯವನ್ನು ಸಲ್ಲಿಸಿರುವುದಿಲ್ಲ.

5. ದೂರರ್ಜಿ, ಉಪ ಪೋಲೀಸ್ ಅಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ದಿನಾಂಕ 10-5-2018ರಂದು ದೂರರ್ಜಿದಾರರು ಮೆಯೋ ಹಾಲ್ ನ್ಯಾಯಾಲಯದಿಂದ ಮನೆಗೆ ಆಟೋದಲ್ಲಿ ಹೋಗುತ್ತಿರುವ ಸಂದರ್ಭದಲ್ಲಿ ಕೆ.ಆರ್.ಪುರಂ ಪೋಲೀಸ್ ಠಾಣೆಯ ಮುಖ್ಯ ಪೇದೆಗಳಾದ ವೆಂಕಟೇಶ್ ಮತ್ತು ಬಸವರಾಜ ಎಂಬುವವರು ದೂರರ್ಜಿದಾರರ ಮೇಲೆ ವಾರೆಂಟ್ ಇರುತ್ತದೆಂದು ಅವರನ್ನು ಕೆ.ಆರ್.ಪುರಂ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ಅಕ್ರಮ ಬಂಧನದಲ್ಲಿಟ್ಟು ನಂತರ ಕೆ.ಆರ್.ಪುರಂ ಪೋಲಿಸ್ ಠಾಣೆಯ ಇನ್ಸ್‌ಪೆಕ್ಟರ್ ಆದ ಜಯರಾಜ್ ಮತ್ತು ಸಬ್ ಇನ್ಸ್‌ಪೆಕ್ಟರ್ ಆದ ಮಂಜುನಾಥ ರವರು ದೂರುದಾರರ ಮೇಲೆ ಹಲ್ಲೆ ನಡೆಸಿ ಚೆಕ್ ಬೌನ್ಸ್ ಕೇಸಿಗೆ ಸಂಬಂಧಿಸಿದಂತೆ ರೂ.8,50,000/-ಗಳನ್ನು ಶ್ರೀಮತಿ ಸೆಲ್ವಿ ಎಂಬುವವರಿಗೆ ನೀಡಬೇಕೆಂದು ಕಾನೂನು ಬಾಹಿರವಾಗಿ ಅಧಿಕಾರ ದುರುಪಯೋಗ ಪಡಿಸಿಕೊಂಡು ದೂರರ್ಜಿದಾರರನ್ನು ಅಕ್ರಮ ಬಂಧನದಲ್ಲಿಟ್ಟು ಅವಮಾನಗೊಳಿಸಿ ಅವರ ಮಾನವ ಹಕ್ಕಿನ ಉಲ್ಲಂಘನೆ ನಡೆಸಿರುವುದು ಕಂಡುಬರುತ್ತದೆ. ಆದುದರಿಂದ, ಈ ಕೆಳಕಂಡಂತೆ ಅಭಿಪ್ರಾಯ/ವರದಿ ಮತ್ತು ಶಿಫಾರಸ್ಸು ಮಾಡಲಾಗಿದೆ.

6. ಕೆ.ಆರ್.ಪುರಂ ಪೋಲಿಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ಜಯರಾಜ್, ಹೆಚ್., ಸಬ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ, ಹೆಚ್., ಮುಖ್ಯ ಪೇದೆಗಳಾದ ಶ್ರೀ ವೆಂಕಟೇಶ್, ಜಿ. ಮತ್ತು ಬಸವರಾಜಪ್ಪ, ಜೆ.ಎಸ್. ರವರು ದೂರುದಾರರಾದ ರಾಘವೇಂದ್ರ, ಟಿ.ಕೆ. ರವರ ಸ್ವಾತಂತ್ರ್ಯ ಮತ್ತು ಘನತೆಗೆ ಧಕ್ಕೆ ಉಂಟುಮಾಡಿ ಅವರ ಮಾನವ ಹಕ್ಕಿನ ಉಲ್ಲಂಘನೆ ಮಾಡಿರುವುದು ರುಜುವಾತಾಗಿರುವುದರಿಂದ, ದೂರುದಾರರಿಗೆ ರೂ.40,000/-ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗೆ ಸರ್ಕಾರದಿಂದ ನೀಡಲು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆ ಬಗ್ಗೆ ಇಲಾಖಾ ವಿಚಾರಣೆ ಆದನಂತರ ವಿಚಾರಣೆಯ ತೀರ್ಪಿಗೆ ಒಳಪಟ್ಟಿದ್ದು, ಕೆ.ಆರ್. ಪುರಂ ಪೋಲೀಸ್ ಠಾಣೆಯ ಆಗಿನ ಪಿ.ಐ. ಜಯರಾಮ್, ಹೆಚ್., ಪಿ.ಎಸ್.ಐ. ಮಂಜುನಾಥ, ಹೆಚ್., ಮುಖ್ಯ ಪೇದೆಗಳಾದ ಶ್ರೀ ವೆಂಕಟೇಶ್, ಜಿ. ಮತ್ತು ಬಸವರಾಜಪ್ಪ, ಜೆ.ಎಸ್. ಇವರುಗಳ ವೇತನದಿಂದ ತಲಾ ರೂ.10,000/-ದಂತೆ ಪರಿಹಾರ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲು ಶಿಫಾರಸ್ಸು ಮಾಡಲಾಗಿದೆ.

7. ಕೆ.ಆರ್.ಪುರಂ ಪೋಲಿಸ್ ಠಾಣೆಯ ಆಗಿನ ಇನ್ಸ್‌ಪೆಕ್ಟರ್ ಶ್ರೀ ಜಯರಾಜ್, ಹೆಚ್., ಸಬ್ ಇನ್ಸ್‌ಪೆಕ್ಟರ್ ಶ್ರೀ ಮಂಜುನಾಥ, ಹೆಚ್., ಮುಖ್ಯ ಪೇದೆಗಳಾದ ಶ್ರೀ ವೆಂಕಟೇಶ್, ಜಿ. ಮತ್ತು ಬಸವರಾಜಪ್ಪ, ಜೆ.ಎಸ್. ಇವರುಗಳ ಮೇಲೆ ನಿಯಮಾನುಸಾರ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದೂರರ್ಜಿ ಮತ್ತು

ಇತರ ದಾಖಲೆಗಳನ್ನು ಪರಿಗಣಿಸಿ ದೋಷಾರೋಪಣ ಪತ್ರವನ್ನು ರಚಿಸಿ ಉಭಯ ಪಕ್ಷದವರಿಗೂ ಅವಕಾಶ ನೀಡಿ, ಇಲಾಖಾ ವಿಚಾರಣೆ ನಡೆಸಬೇಕೆಂದು ಪೋಲೀಸ್ ಮಹಾ ನಿರ್ದೇಶಕರು ಮತ್ತು ಪೋಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ಇವರಿಗೆ ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ ಮತ್ತು ಇಂಥಹ ಪ್ರಕರಣಗಳು ಮರುಕಳಿಸದಂತೆ ಪೋಲೀಸರಿಗೆ ಸಾರ್ವಜನಿಕರ ಮಾನವ ಹಕ್ಕಿನ ಬಗ್ಗೆ ಸೂಕ್ತವಾಗಿ ಜಾಗೃತಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

೮. ಮೇಲ್ಕಂಡ ಶಿಫಾರಸ್ಸುಗಳನ್ನು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, ೧೯೯೩ ೧೯(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳೊಳಗೆ ಅನುಪಾಲನಾ ವರದಿಯನ್ನು ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೋಲಿಸ್ ಸಿಬ್ಬಂಧಿಯವರು ಕಲಂ ೨೨ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, ೧೯೯೩ರ ಅನುಸಾರ ಅಭಿಪ್ರಾಯ/ಶಿಫಾರಸ್ಸುಗಳನ್ನು ತಿದ್ದುಪಡಿ/ಮರುಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಿ ಮೇಲ್ಕಂಡ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

(ಕೆ.ಬಿ. ಚಂಗಪ್ಪ)
ಸದಸ್ಯರು

ಎಸ್ಸಾರೆಸ್